**5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಸ್ಪೇಷಲ್ ಕೇಸ್ ನಂ.36/2024**

ಪ್ರಾ.ಸಾ. 1

ಚಾ.ಸಾ. 1

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 28.01.2025**

| | |
|---|---|
| ಸಾಕ್ಷಿದಾರರ ಹೆಸರು | ಶಿವಲಿಂಗಮ್ಮ |
| ಗಂಡನ ಹೆಸರು | ಕೃಷ್ಣಯ್ಯ |
| ವಯಸ್ಸು | 58 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸ | ಮಾಚಹಳ್ಳಿ ಗ್ರಾಮ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1. ಚಾಸಾ.2 ನನ್ನ ಮಗಳು, ಚಾಸಾ.3 ನನ್ನ ಗಂಡ, ನಾವು ಪರಿಶಿಷ್ಟ ಜಾತಿಗೆ ಸೇರಿದವರು ಆಗಿರುತ್ತೇವೆ. ಚಾಸಾ.4 ರಿಂದ 9 ಗೊತ್ತು. ಅವರು ನಮ್ಮ ಊರಿನವರು. ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು. ಅವರು ನಮ್ಮ ಊರಿನವರು. ಅವರು ಒಕ್ಕಲಿಗರು. ನಾವು ಪರಿಶಿಷ್ಟ ಜಾತಿಯವರು ಎಂದು ಆರೋಪಿತರಿಗೆ ಮೊದಲಿನಿಂದಲೂ ಗೊತ್ತು.

2. ನನಗೆ ಪ್ರಮೋದ ಮತ್ತು ಚಾಸಾ.2 ಪ್ರಭಾವತಿ ಎಂಬ ಇಬ್ಬರು ಮಕ್ಕಳು. ಪ್ರಭಾವತಿಯನ್ನು ನಂಜನಗೂಡಿನ ಬದನವಾಳು ಗ್ರಾಮದ ಕಾಂತರಾಜು ರವರಿಗೆ ಕೊಟ್ಟು ಮದುವೆ ಮಾಡಲಾಗಿದೆ. ಅವರು ನಮ್ಮ ಊರಿನಲ್ಲಿ ವಾಸ ಇದ್ದಾರೆ. ನಾನು ಕೂಲಿ ಕೆಲಸ ಮಾಡುತ್ತೇನೆ. ನನಗೆ ಸರ್ವೆ ನಂ.27 ರಲ್ಲಿ ಎರಡೂವರೆ ಎಕರೆ ಜಮೀನು ಮಾಚಹೊಳಲು

ಗ್ರಾಮದಲ್ಲಿದೆ. ಸುಮಾರು 50 ವರ್ಷದಿಂದಲೂ ಉಳುಮೆ ಮಾಡಿಕೊಂಡು ಬರುತ್ತಿದ್ದೇವೆ. 1 ನೇ ಆರೋಪಿ ಜಮೀನು ನಮ್ಮ ಹೊಲದ ಪಕ್ಕದಲ್ಲಿದೆ. ಸುಮಾರು 30 ವರ್ಷದಿಂದಲೂ ಜಮೀನಿಗೆ ಸಂಬಂಧಪಟ್ಟಂತೆ ಇಬ್ಬರ ನಡುವೆ ನ್ಯಾಯಾಲಯದಲಿಲ ಸಿವಿಲ್ ದಾವೆ ನಡೆಯುತ್ತಿದೆ.

3. ಒಂದು ವರ್ಷದ ಹಿಂದೆ ಬೆಳಗ್ಗೆ 10.00 ಗಂಟೆ ಸಮಯದಲ್ಲಿ ನಾನು, ಚಾಸಾ.2 ರಿಂದ 3 ರವರು ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ನ್ಯಾಯಾಲಯದ ಮುಂದಿರುವ 7 ಜನ ಆರೋಪಿತರು ಗುಂಪು ಕಟ್ಟಿಕೊಂಡು ಬಂದು ಇದು ನಮ್ಮ ಜಮೀನು ಹೊರಗಡೆ ಹೋಗಿ ಎಂದು ಏಕಏಕಿ ಹೊಡೆದು ಜಗಳ ತೆಗೆದು ನನಗೆ ಹೊಲೆಯ ಮುಂಡೆ, ಇದು ಕೋರ್ಟಿನಲ್ಲಿ ನನ್ನಂತೆ ಆಗಿದೆ ಎಂದು ಅವ್ಯಾಚ ಶಬ್ಧದಿಂದ ಜಾತಿ ನಿಂದನೆ ಮಾಡಿದರು. 1 ನೇ ಆರೋಪಿ ಆತನ ಕೈಯಲ್ಲಿದ್ದ ಮಚ್ಚಿನಿಂದ ಚಾಸಾ.2 ರವರ ಬೆನ್ನಿಗೆ ಹೊಡೆದನು, ಮೂರನೇ ಆರೋಪಿ ದೊಣ್ಣೆಯಿಂದ ನನ್ನ ಕೈ ಕಾಲಿಗೆ, ತಲೆಗೆ ಹೊಡೆದನು, ನನ್ನ ಸೀರೆ ಹಿಡಿದು ಎಳೆದಾಡಿ ಹರಿದು ಹಾಕಿದರು, ಚಾಸಾ.2 ರವರ ನೈಟಿ ಹಿಡಿದು ಎಳೆದಾಡಿ ಅವಮಾನಿಸಿದರು.

4. ಗಲಾಟೆ ನೋಡಿ ಚಾಸಾ.4 ರಿಂದ 7 ರವರು ಗಲಾಟೆ ಬಿಡಿಸಿದರು. ನನಗೆ, ಚಾಸಾ.2 ರವರಿಗೆ ಪೆಟ್ಟು ಆಗಿತ್ತು. ನಮ್ಮನ್ನು ಕೆ.ಆರ್.ಪೇಟೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಪಡೆದು ಅಲ್ಲಿಂದ ಮೈಸೂರಿನ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡೆವು. ನಂತರ ಠಾಣೆಗೆ ಬಂದು ದೂರು ನೀಡಿರುತ್ತೇನೆ. ಈಗ ನಾನು ಸಲ್ಲಿಸಿರುವ ದೂರು ನೋಡುತ್ತಿದ್ದು, ಅದನ್ನು ನಿಪಿ.1 ಎಂದು ಸಾಕ್ಷಿಯ ಸಹಿಯನ್ನು ನಿಪಿ.1 ಎ ಎಂದು ಗುರುತಿಸಲಾಗಿದೆ.

5. ಆರೋಪಿತರು ಹಲ್ಲೆಗೆ ಉಪಯೋಗಿಸಿದಂತಹ ಮಚ್ಚು, ದೊಣ್ಣೆ, ಕಲ್ಲು, ಸೀರೆ, ರವಿಕೆ ಹಾಗೂ ನೈಟಿಗಳನ್ನು ನೋಡಿದರೆ ಗುರುತಿಸುತ್ತೇನೆ. ನನ್ನ ಹಾಗೂ ಚಾಸಾ.2 ರವರ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ.

6. ನ್ಯಾಯಾಲಯದ ಮುಂದಿರುವ ಸೀಲಾದ ಚೀಲ ತೆಗೆದು ಅದರಲ್ಲಿರುವ ಮಚ್ಚು, ದೊಣ್ಣೆ, ಕಲ್ಲು, ಸೀರೆ, ರವಿಕೆ ಹಾಗೂ ನೈಟಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಮಚ್ಚನ್ನು ಮು.ಮಾ.1, ದೊಣ್ಣೆ ಮು.ಮಾ.2, ಎರಡು ಕಲ್ಲುಗಳು ಮು.ಮಾ.3 ಹಾಗೂ 4 ಎಂದು, ಸೀರೆ ಮು.ಮಾ.5, ರವಿಕೆ ಮು.ಮಾ.6, ಚಾಸಾ.2 ರವರ ನೈಟಿ ಮು.ಮಾ.7 ಎಂದು ಗುರುತಿಸಲಾಗಿದೆ.

7. ಗಲಾಟೆ ಮಾಡಿ ಹಲ್ಲೆ ಮಾಡಿದಂತಹ ವ್ಯಕ್ತಿಗಳು ನ್ಯಾಯಾಲಯದ ಮುಂದಿರುವ ಆರೋಪಿತರು ಆಗಿರುತ್ತಾರೆ. ಈ ಎಲ್ಲಾ ವಿಷಯ ಕುರಿತು ಪೊಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಪಾಟೀ ಸವಾಲಿಗೆ ಕಾಲಾವಕಾಶ ಕೇಳಿರುತ್ತಾರೆ. ಆದ್ದರಿಂದ ಪಾಟೀ ಸವಾಲಿಗೆ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ನಿರ್ಮಲ ಕೆ.)

C/c 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.